**2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.**

ಸಿ.ಸಿ. ನಂ. 1591/2016

ಸಿಡಬ್ಲ್ಯೂ 1 ಪಿಡಬ್ಲ್ಯೂ 1

ದಿನಾಂಕಃ 05-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ**

ದಿಃ 15-08-2016 ರಂದು ಮುಂಜಾನೆ 8-00 ಗಂಟೆಗೆ ಹೋಲಕ್ಕೆ ಹೋಗುವಾಗ 4 ನೇ ಆರೋಪಿತಳು ಬಂದು ನನಗೆ ನನ್ನ ಹೋಲಕ್ಷ ಏಕೆ ಹೋಗುತ್ತಿದ್ದಿ ಎಂದಳು ಆಗ ನಾನು ನನ್ನ ಹೊಲಕ್ಕೆ ನಾನು ಹೋಗುತ್ತಿದ್ದೇನೆ ಎಂದು ಹೇಳಿದೆನು. ಆಗ 4 ನೇ ಆರೋಪಿ ನನ್ನನ್ನು ಹಿಡಿದು ಜಗ್ಗಿದ್ದಳು. 1 ರಿಂದ 3 ನೇ ಆರೋಪಿತರು ಬಂದು ನನಗೆ ಹೊಡೆದರು. ನಾನು ಚೀರಾಡುತ್ತಿದ್ದಾಗ ಚಾಸಾ-3 ಹಾಗೂ ಕಾಡಪ್ಪಾ ಬಾಳೋಬಾಳ ಅವರು ಜಗಳವನ್ನು ಬಿಡಿಸಿಕೊಂಡರು. 1 ರಿಂದ 4 ನೇ ಆರೋಪಿತರು ನನಗೆ ಬೈಯುತ್ತಾ ಹೋದರು. ನಂತರ ನಾನು ಗೋಕಾಕ ಸರ್ಕಾರಿ ಆಸ್ಪತ್ರೆಗೆ ಬಂದೆನು.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 15-08-2016 ರಂದು ನಾನು ಹೋಲಕ್ಕೆ ಹೋಗುವಾಗ ಆರೋಪಿತರು ನನಗೆ ಅಡ್ಡಗಟ್ಟಿ ತರುಬಿದರು ಎಂದರೆ ಸರಿ. ಆರೋಪಿತರು ಹೋಗುವಾಗ ನನಗೆ ಜೀವದ ಬೆದರಿಕೆ ಹಾಕಿದ್ದಾರೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ದಾಖಲಿದ್ದಾಗ ದಿಃ 16-08-2016 ರಂದು ಪೊಲೀಸರು ಅಲ್ಲಿಗೆ ಬಂದು ನನ್ನ ದೂರನ್ನು ಸ್ವೀಕರಿಸಿಕೊಂಡಿರುತ್ತಾರೆ ಎಂದರೆ ಸರಿ. ದಿಃ 17-08-2016 ರಂದು ಪಂಚನಾಮೆ ಮಾಡಲು ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಪಂಚನಾಮೆಯನ್ನು ಮಾಡಲು ಗುನ್ನಾ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದೇನೆ ಎಂದರೆ ಸರಿ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಘಟನಾ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಶ್ರೀ ಆರ್ ಎಸ್ ಎನ್ ವಕೀಲರು, ಶ್ರೀ ಬಿ ಕೆ ಕೆ ವಕೀಲರ ಪರವಾಗಿ ಪಾಟೀ ಸವಾಲಿಗೆ ಕಲಾವಕಾಶ ಕೋರಿದ್ದು, ಸಮಂಜಸ ಕಾರಣಗಳು ಇಲ್ಲದೆ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.